ಸಂ:ಕುಯೋಪ್ರಾ/ಸಕಾ/ಸಿ.ಎ. ನಿವೇಶನ/ಪ್ರಕಟಣೆ–02/2024–25 ದಿನಾಂಕ:24–10–2024

ಕರ್ನಾಟಕ ಸರ್ಕಾರ

ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

Planning Authority, Kushalngar, No.5, Kaveri Badavane, Kushalnagar-571234

ಸಂಘ/ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳ ಪಟ್ಟಿ

1	2	3	4	5	6	7	8	9
ಕ್ರ ಸಂ	ಪಟ್ಟಣ/ಗ್ರಾಮ	ವಿನ್ಯಾಸದ ಮಾಲೀಕರ ಹೆಸರು	ಸರ್ವೆ ನಂ	ನಾಗರೀಕ ಸೌಲಭ್ಯ ಜಾಗದ ವಿಸ್ತೀರ್ಣ ಚ.ಮೀ.ಗಳಲ್ಲಿ	ಉಪನೊಂದಣಾಧಿಕಾರಿಗಳ ದರ (ರೂಪಾಯಿಗಳಲ್ಲಿ)	ಶೇ. 10% ಠೇವಣಿ ಮೊತ್ತ	ನೋಂದಣಿ ಶುಲ್ಕ (ರೂಪಾಯಿಗಳಲ್ಲಿ)	ನಿಗದಿತ ಉದ್ದೇಶ
1	ಬೈಚನಹಳ್ಳಿ	ಶ್ರೀ ಅನಿಲ್ ಎಂ.ಎಂ. ಮತ್ತು ಸುನೀತ ಎಂ.ಎಂ.	89/5	226.61 ಚ.ಮೀ	11,33,050=00	1,13,305=00	2000=00	ಶೈಕ್ಷಣಿಕ/ ಸಾಂಸ್ಕೃತಿಕ/ ಧಾರ್ಮಿಕ/ ಸಾಮಾಜಿಕ/ ಆರೋಗ್ಯ ಕೇಂದ್ರ/ ಸರ್ಕಾರಿ/ ಅರೆಸರ್ಕಾರಿ
2	ಬೈಚನಹಳ್ಳಿ	ಶ್ರೀಮತಿ ದೇವಮ್ಮ	9/2, 10/2, 89/4	819.49 ಚ.ಮೀ	40,97,450=00	4,09,745=00	2000=00	
3	ಬೈಚನಹಳ್ಳಿ	ಚಂದ್ರಶೇಖರ್ ಬಡಾವಣೆ	80/2	1078.08 ಚ.ಮೀ	53,90,400=00	5,39,040=00	4000=00	
4	ಮುಳ್ಳುಸೋಗೆ	ಶ್ರೀ ಎಂ.ಕೆ. ರವೀಂದ್ರ	1/1	192.28 ಚ.ಮೀ	11,53,680=00	1,15,368=00	2000=00	
5	ಮುಳ್ಳುಸೋಗೆ	ಶ್ರೀ ಎಂ.ಕೆ. ರವೀಂದ್ರ	93	839.36 ಚ.ಮೀ	50,36,160=00	5,03,616=00	2000=00	
6	ಮುಳ್ಳುಸೋಗೆ	ಶ್ರೀ ಚಂದ್ರಶೆಟ್ಟಿ	43/1, 43/2	1113.05 ಚ.ಮೀ	66,78,300=00	6,67,830=00	4000=00	
7	ಗುಮ್ಮನಕೊಲ್ಲಿ	ಶ್ರೀಮತಿ ಎಂ.ಜೆ. ಶೋಭಾ	85/4	348.37 ಚ.ಮೀ	20,90,220=00	2,09,022=00	2000=00	
8	ಗುಮ್ಮನಕೊಲ್ಲಿ	ಇ. ಜವಾಹರ್	37/4	151.85 ಚ.ಮೀ	9,11,100=00	91,110=00	2000=00	
9	ಗುಮ್ಮನಕೊಲ್ಲಿ	ಇ. ಜವಾಹರ್	37/4	151.687 ಚ.ಮೀ	9,10,122=00	91,012=20	2000=00	
10	ಕೂಡ್ಲೂರು	ಶ್ರೀ ಯು.ಎಂ. ಲಕ್ಷ್ಮಣ್	59/9	144.0 ಚ.ಮೀ	8,64,000=00	86,400=00	2000=00	
11	ಕೂಡ್ಲೂರು	ಕೃಷ್ಣೋಜಿರಾವ್	66/9	405.17 ಚ.ಮೀ	24,31,020=00	2,43,102=00	2000=00	
12	ಮಾದಾಪಟ್ಟಣ	ಶ್ರೀ ಯು.ಎಂ. ಚಿಟ್ಟಿಯಪ್ಪ ಮತ್ತು ಶ್ರೀಮತಿ ಬೊಳ್ಳಮ್ಮ	59/1, 59/2, 59/3	350.25 ಚ.ಮೀ	21,01,500=00	2,10,150=00	2000=00	

ಷರತ್ತುಗಳು

1) ಸಿ.ಎ. ನಿವೇಶನಗಳನ್ನು ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು–2016ರ ಪ್ರಕಾರ ಹಂಚಿಕೆ ಮಾಡಲಾಗಿರುತ್ತದೆ.
2) ಸಂಸ್ಥೆ ಅಂದರೆ 1960ರ ಕರ್ನಾಟಕ ಸಂಸ್ಥೆಗಳ ನೊಂದಣಿ ಅಧಿನಿಯಮದನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ ಸೊಸೈಟಿ ಅಥವಾ ಸಂಘ ಅಥವಾ 1964ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದನ್ವಯ ನೋಂದಣಿಯಾಗಿರುವ ಸಹಕಾರಿ ಸಂಘ ಅಥವಾ ಧರ್ಮಾರ್ಥ ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಕ್ಕಾಗಿ ಸಂಪೂರ್ಣವಾಗಿ ರಚನೆಯಾಗಿರುವ ಒಂದು ಟ್ರಸ್ಟ್ ಎಂದು ಅರ್ಥ
3) ನಾಗರೀಕ ಸೌಲಭ್ಯ ನಿವೇಶನವನ್ನು 30 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಿ, ಲೀಸ್ ಅಗ್ರಿಮೆಂಟ್ ಮುಖಾಂತರ ನೋಂದಣಿ ಮಾಡಲಾಗುವುದು.
4) ಈ ಹಿಂದೆ ಅರ್ಜಿ ಸಲ್ಲಿಸಿದವರು ಸಹ ಈ ಪ್ರಕಟಣೆ ರೀತ್ಯಾ ಹೊಸದಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ.

5) ರೂ. 100/– ಗಳನ್ನು **Member Secretary, Planning Authority, Kushalnagar** ರವರ ಹೆಸರಿಗೆ(ಖಾತೆ ಸಂಖ್ಯೆ **64041739956**) ಡಿಮ್ಯಾಂಡ್ ಡ್ರಾಫ್ಟ್ (**D D**) ಯನ್ನು ಪಡೆದು, ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ನಾಗರೀಕ ಸೌಲಭ್ಯ (**C.A Site**) ನಿವೇಶನಕ್ಕೆ ಸಲ್ಲಿಸುವ ಅರ್ಜಿಯನ್ನು ಪಡೆಯತಕ್ಕದ್ದು.

6) ಭರ್ತಿ ಮಾಡಿದ ಅರ್ಜಿಯನ್ನು ಪತ್ರಿಕೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳ ಒಳಗಾಗಿ ನಿಗದಿಪಡಿಸಿದ ನೋಂದಣಿ ಶುಲ್ಕ (ಕಾಲಂ ನಂ. 8 ರಂತೆ) ಮತ್ತು ಪ್ರಾರಂಭಿಕ ಠೇವಣಿ (ಕಾಲಂ ನಂ. 7ರ) ಮೊತ್ತಕ್ಕೆ ಪ್ರತ್ಯೇಕವಾಗಿ 02 ಡಿಮ್ಯಾಂಡ್ ಡ್ರಾಫ್ಟ್ (**D D**) ಯನ್ನು ಪಡೆದು, ಅರ್ಜಿಗೆ ಲಗತ್ತಿಸಿ ಪ್ರಾಧಿಕಾರಕ್ಕೆ ಸಲ್ಲಸಬೇಕು. ಉಳಿದ ಷರತ್ತುಗಳನ್ನು ಅರ್ಜಿ ಸಂಗಡ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸದಸ್ಯ ಕಾರ್ಯದರ್ಶಿಯರನ್ನಾಗಲೀ ಅಥವಾ ನಗರ ಯೋಜನಾ ಪ್ರಾಧಿಕಾರದ ಸದಸ್ಯರನ್ನಾಗಲೀ ಸಂಪರ್ಕಿಸಬಹುದು.

7) ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಇಲಾಖೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಡಿಯಲ್ಲಿ ಸ್ಥಾಪಿಸಲಾಗಿರುವ ಸ್ಥಳೀಯ ಪ್ರಾಧಿಕಾರ ಮತ್ತು ಶಾಸನಾತ್ಮಕ ಈ ನಿಯಮಗಳ ಅಡಿಯಲ್ಲಿ ಮಾಡಲಾದ ಹಂಚಿಕೆಗಾಗಿ ನೋಂದಣಿ ಶುಲ್ಕವನ್ನು ಸಂದಾಯ ಮಾಡುವುದರಿಂದ ವಿನಾಯಿತಿ ಹೊಂದಿರುತ್ತದೆ.

8) ನಿವೇಶನಗಳ ಶೇ. 18 ರಷ್ಟು ಬಹುಪಾಲು ಸದಸ್ಯರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುವ ಅಥವಾ ಪರಿಶಿಷ್ಟ ಜಾತಿಯವರ ಅನುಕೂಲಕ್ಕಾಗಿ ಪ್ರತ್ಯೇಕವಾಗಿ ಸ್ಥಾಪನೆಯಾಗಿರುವ ಸಂಸ್ಥೆಗಳಿಗೆ, ಶೇ.3 ರಷ್ಟು ನಿವೇಶನಗಳನ್ನು ಪರಿಶಿಷ್ಟ ಪಂಗಡದವರ ಅನುಕೂಲಕ್ಕಾಗಿಯೇ ಸ್ಥಾಪನೆಯಾಗಿರುವ ಸಂಸ್ಥೆಗಳಿಗೆ ಹಾಗೂ ಶೇ. 2 ರಷ್ಟು ದೈಹಿಕ ಮತ್ತು ಮಾನಸಿಕ ನ್ಯುನತೆಯನ್ನು ಅಸ್ವಸ್ಥ ವ್ಯಕ್ತಿಗಳ ಅನುಕೂಲಕ್ಕಾಗಿ ಸ್ಥಾಪಿಸಿರುವ ಸಂಸ್ಥೆಗೆ ಮೀಸಲಿರಿಸಲಾಗಿದೆ. ಅಂತಹ ಸಂಸ್ಥೆಯ ಬಹುಪಾಲು ಸದಸ್ಯರು ಪರಿಶಿಷ್ಟ ಪಂಗಡಕ್ಕೆ ಸೇರಿದರವಾಗಿರಬೇಕು.

9) ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸಲು ಯಾವುದೇ ಸಂಸ್ಥೆ ಬಯಸಿದ್ದಲ್ಲಿ ಪ್ರತಿ ನಿವೇಶನಕ್ಕೆ ಪ್ರತ್ಯೇಕವಾಗಿ ನೋಂದಣಿ ಮಾಡಬೇಕು

10) ಸಂಸ್ಥೆಗೆ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಆದ ಪಕ್ಷದಲ್ಲಿ ಅವರು ಪಾವತಿ ಮಾಡಿದ್ದ ನೊಂದಣಿ ಶುಲ್ಕವನ್ನು ಮರುಪಾವತಿ ಮಾಡುವುದಿಲ್ಲ.

11) ನಾಗರೀಕ ಸೌಲಭ್ಯ ನಿವೇಶನವನ್ನು ಪಡೆಯಲು ಅಥವಾ ಅರ್ಜಿ ಸಲ್ಲಿಸುವ ಸಂಸ್ಥೆಯವರು ಈ ಕೆಳಕಂಡ ದಾಖಲೆಗಳೊಂದಿಗೆ ಕಾಲಂ(9) ರಂತೆ ನೋಂದಣಿ ಶುಲ್ಕ ಹಾಗೂ ಕಲಂ(8) ರಲ್ಲಿಯ ನಿವೇಶನದ ಶೇ. 10 ರಷ್ಟು ಮೊತ್ತವನ್ನು ಪ್ರಾರಂಭಿಕ ಠೇವಣಿ (ಗುತ್ತಿಗೆ) ಮೊತ್ತದೊಂದಿಗೆ ಪ್ರಾಧಿಕಾರದಿಂದ ಪಡೆದ ಅರ್ಜಿಯ ಜೊತೆಗೆ ಸಲ್ಲಿಸತಕ್ಕದ್ದು.

(ಅ) ಸಂಸ್ಥೆಯ ನೋಂದಣಿಯಾಗಿರುವ ಬಗ್ಗೆ ದಾಖಲೆಗಳು

(ಆ) ಸಂಸ್ಥೆಯ ಕಾರ್ಯ ಮತ್ತು ಉದ್ದೇಶ ಹಾಗೂ ಸಾರ್ವಜನಿಕ ಸೇವೆಯ ಬಗ್ಗೆ ವಿವರ, ಸಂಸ್ಥೆಯ ಆಡಳಿತ ಮಂಡಳಿಯ ವಿವರ

(ಇ) ಸಂಸ್ಥೆಯು ಹಾಲಿ ಇರುವ ಪ್ರದೇಶದ ವಿವರ

(ಈ) ಸಂಸ್ಥೆಯ ಹಣಕಾಸಿನ ಪರಿಸ್ಥಿತಿಯನ್ನು ತೋರಿಸುವ ಸಂಸ್ಥೆಯ ಹೆಸರಿನಲ್ಲಿರುವ ಬಗ್ಗೆ ದಾಖಲೆಗಳು

(ಉ) ಸಂಸ್ಥೆಯ 3 ವರ್ಷಗಳ ಲೆಕ್ಕ ಪರಿಶೋಧನಾ ವರದಿ

(ಊ) ನಿವೇಶನ ಪಡೆಯುವ ಉದ್ದೇಶ

(ಋ) ಸಂಸ್ಥೆಯನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಅನುಕೂಲಕ್ಕಾಗಿ ಸ್ಥಾಪಿಸಿದ್ದರೆ ಅಥವಾ ಸಂಸ್ಥೆಯ ಬಹು ಸಂಖ್ಯೆಯ ಸದಸ್ಯರು ಈ ವರ್ಗಗಳಿಗೆ ಸೇರಿರುವ ದಾಖಲಾತಿಗಳು

ಸೂಚನೆ: ಹೆಚ್ಚಿನ ಮಾಹಿತಿಗಾಗಿ ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿ ಸಮಯದಲ್ಲಿ ಬಂದು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಸದಸ್ಯ ಕಾರ್ಯದರ್ಶಿ
ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ

ಸಹಿ/–
ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ